ವರುಣಾ ನಾಲೆ ನಿರ್ಮಾಣ

೧೪೭೭(೨೯೮೫) ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಕೃಷ್ಣರಾಜಸಾಗರ ಜಲಾಶಯದ ''ವರುಣ ನಾಲೆ'' ಯ ಬಲದಂಡೆ ನಿರ್ಮಾಣ ಕಾರ್ಯ ವಿಳಂಬವಾಗುತ್ತಿರಲು ಕಾರಣಗಳೇನು?

ಆ) ಈ ನಾಲಾ ನಿರ್ಮಾಣದ ಅಂದಾಜು ವೆಚ್ಚ ಎಷ್ಟು ಹಾಗೂ ನಾಲೆಯ ಉದ್ದವೆಷ್ಟು?

ಇ) ಈ ವರ್ಷ ನಾಲಾ ನಿರ್ಮಾಣಕ್ಕೆ ಎಷ್ಟು ಹಣ ಖರ್ಚು ಮಾಡಲಾಗುವುದು?

ಈ) ನಾಲೆ ನಿರ್ಮಾಣ ಯಾವಾಗ ಪೂರ್ಣಗೊಳ್ಳುವುದು?

ಉ) ಪೂರ್ಣಗೊಂಡ ಮೇಲೆ ಒಟ್ಟು ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರಕುವುದು? (ವಿವರ ನೀಡುವುದು)

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹಣಕಾಸಿನ ಇತಿಮಿತಿಯೇ ಮುಖ್ಯ ಕಾರಣ.

ಆ) ೫,೮೧೦ ಲಕ್ಷ ರೂ.ಗಳು ೧೩೫ ಕಿ.ಮೀ.

ಇ) ೩೫೫ ಲಕ್ಷ ರೂ.ಗಳು.

ಈ) ಹಣಕಾಸಿನ ಲಭ್ಯತೆಯನ್ನು ಅವಲಂಬಿಸಿ ಆನೇ ಯೋಜನೆಯಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಉ) ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ೩೨,೩೭೫ ಹೆಕ್ಟೇರುಗಳು.

ಕಬಿನಿ ಯೋಜನೆಯಲ್ಲಿ ಮುಳುಗಡೆಯಾದ ಜಮೀನು

೧೪೭೮(೨೯೮೭) ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಮೈಸೂರು ಜಿಲ್ಲೆಯಲ್ಲಿ ಕಬಿನಿ ಜಲಾಶಯ ನಿರ್ಮಾಣವಾದುದರಿಂದ ಮುಳುಗಡೆ ಆಗಿರುವ ಒಟ್ಟು ಜಮೀನಿನ ವಿಸ್ತೀರ್ಣವೆಷ್ಟು? ಹಾಗೂ ಅದರಿಂದ ನೊಂದ ರೈತ ಕುಟುಂಬಗಳೆಷ್ಟು?

ಆ) ಈ ರೀತಿ ಜಮೀನು ಮನೆ ಕಳೆದುಕೊಂಡಂತಹ ರೈತರ ಪುನರ್ವಸತಿ ಬಗ್ಗೆ ಎಷ್ಟು ಭೂಮಿ ಬೇಸಾಯಕ್ಕೆ ಮತ್ತು ಮನೆ ಕಟ್ಟಿಕೊಳ್ಳಲು ಮಂಜೂರಾಗಿದೆಯೇ?

ಇ) ಜಲಾಶಯದಿಂದ ಜಮೀನನ್ನು ಕಳೆದುಕೊಂಡ ರೈತ ಕುಟುಂಬದ ಜಾನುವಾರುಗಳಿಗೆ, ಅವುಗಳ ಸಂಖ್ಯೆಗೆ ಅನುಗುಣವಾಗಿ ಗೋಮಾಳ ಜಮೀನನ್ನು ಕಾಯ್ದಿರಿಸಲಾಗಿದೆಯೆ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಮುಳುಗಡೆಯಾದ ಪ್ರದೇಶ :

	ಕೃಷಿ	೮,೮೭೦ ಎಕರೆ
	ಅರಣ್ಯ	೬,೫೩೦ ಎಕರೆ
	ಒಟ್ಟು	೧೫,೪೦೦ ಎಕರೆ

ನೊಂದ ಕುಟುಂಬಗಳು ೪,೨೪೧

ಆ) ೧೨,೧೦೧ ಎಕರೆ

ಇ) ಇಲ್ಲ.